ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯಃ ಕೊಪ್ಪ

ಸಿಸಿ.ನಂ. ***98/2023***

ಸಾಕ್ಷಿಯ ಹೆಸರುಃ ಗುಂಜನ್ ಆರ್ಯ ಚಾಸಾಃ 1

ತಂದೆಯ ಹೆಸರುಃ ಶ್ರೀ ಬಾಬುಲಾಲ್ ಆರ್ಯ ಪ್ರಾಸಾಃ 1

ವಯಸ್ಸುಃ 36 ವರ್ಷ

ಉದ್ಯೋಗಃ ಎಸ್ ಪಿ.. ಧಾರವಾಡ

ವಾಸಃ ಧಾರವಾಡ

ದಿನಾಂಕಃ 07-11-2025 ರಂದು ಪ್ರಮಾಣವಚನ ಬೋಧಿಸಲಾಯಿತು.

(ಸದರಿ ಸಾಕ್ಷಿಯನ್ನು ವಿಡಿಯೋ ಕಾನ್ಫರೆನ್ಸ್ ಮುಖಾಂತರ ದಾಖಲು ಮಾಡಲಾಗಿರುತ್ತದೆ. ಸದರಿ ಸಮಯದಲ್ಲಿ ಸಾಕ್ಷಿಗೆ ಸರಿಯಾಗಿ ಕಾಣುತ್ತಿರುವ ಹಾಗೂ ಕೇಳುತ್ತಿರುವ ಬಗ್ಗೆ ಖಚಿತಪಡಿಸಿಕೊಂಡು ನಂತರ ಸಾಕ್ಷ್ಯ ವಿಚಾರಣೆ ಮಾಡಲಾಗಿರುತ್ತದೆ.)

ಃಃ ಮುಖ್ಯ ವಿಚಾರಣೆಃಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃಃ

ಅಕ್ಟೋಬರ್ 2021 ರಿಂದ ಜುಲೈ 2023 ರವರೆಗೂ ನಾನು ಎಪಿಎಸ್ ಸಹಾಯಕ ಪೋಲಿಸ ಉಪವಲಯದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ23/09/2022 ರಂದು ರಾತ್ರಿ ಸುಮಾರು 8-00 ಗಂಟೆಗೆ ನಾನು ಜಯಪುರ ಗ್ರಾಮದ ಡಿಲೈಟ್ ಹೋಮ್ ಸ್ಟೇನಲ್ಲಿ ಅಕ್ರಮವಾಗಿ ಜೂಜಾಟ ಆಡುತ್ತಿದ್ದಾರೆಂದು ಮಾಹಿತಿ ಬಂದಿದ್ದು ನಂತರ ನಾನು, ಚಾಸಾ 11 ಹಾಗೂ ವಾಹನ ಚಾಲಕರೊಂದಿಗೆ ರಾತ್ರಿ 8-15 ರ ಸಮಯಕ್ಕೆ ಕೊಪ್ಪವನ್ನು ಬಿಟ್ಟು ನಂತರ ಚಾಸಾ 4, ಚಾಸಾ 5 ಸದರಿಯವರಿಗೆ ಪೋನ್ ಮೂಲಕ ಕರೆ ಮಾಡಿ ಜಯಪುರ ಬಸ್ ನಿಲ್ದಾಣದ ಬಳಿ ಬರುವಂತೆ ತಿಳಿಸಿದ್ದೆನು. ನಂತರ ಸದರಿ ವಿಚಾರವನ್ನು ಚಾಸಾ 4 ಮತ್ತು 5 ರವರಿಗೆ ತಿಳಿಸಿದೆನು. ಖಾಸಗಿ ಕಾರಿನಲ್ಲಿ ನಾವು ಬಸ್ ನಿಲ್ದಾಣದಿಂದ ಮಾಹಿತಿ ಇದ್ದ ಸ್ಥಳಕ್ಕೆ ಹೋಗಿರುತ್ತೇವೆ. ನಂತರ ರಿಸೆಪ್ಶನ್ ಗೆ

ಹೋಗಿ ರೂಮ್ ನಂಬರ್ 1 ರಲ್ಲಿ ನಾನು ಹಾಗು ಸಿಬ್ಬಂದಿಗಳು ಹೋದಾಗ ಅಂದರ್ ಬಾಹರ್ ಎಂಬ ಶಬ್ದ ಕೇಳಿ ಬರುತ್ತಿತ್ತು. ಸದರಿ ರೂಮಿನ ಒಳಗೆ ಪ್ರವೇಶ ಮಾಡಿದಾಗ ರೂಮ್ ನಂಬರ್ 1 ಆಗಿರುತ್ತದೆ. ಆಗ ಸಮಯ 9-00 ಗಂಟೆಯಾಗಿತ್ತು. ಒಳಗಿದ್ದವರ ಕೈಯಲ್ಲಿ ಇಸ್ಪೀಟ್ ಎಲೆಗಳು ಇದ್ದು ಒಟ್ಟು 3 ಟೇಬಲ್ ಗಳು ಇದ್ದವು. ಸದರಿ ಸ್ಥಳದಲ್ಲಿ ಸುಮಾರು 34 ಪ್ಲಾಸ್ಟಿಕ್ ಚೇರುಗಳು ಇರುವುದು ಕಂಡುಬಂದಿತು. ನಂತರ ಇಸ್ಪೀಟ್ ಎಲೆಗಳನ್ನು ಹಿಡಿದುಕೊಂಡಿದ್ದ ವ್ಯಕ್ತಿಯ ಹೆಸರು ವಿಳಾಸ ಕೇಳಿದಾಗ ಆತನ ಹೆಸರು ರಾಜು, ಬಿನ್ ಲೇಟ್ ತಮ್ಮಯ್ಯ ಎಂದು ತಿಳಿಸಿದರು. ಪರವಾನಿಗೆ ಬಗ್ಗೆ ವಿಚಾರಿಸಲಾಗಿ ಜೂಜಾಡಲು ಯಾವುದೇ ಪರವಾನಿಗೆ ಇರುವುದಿಲ್ಲ ಎಂದು ತಿಳಿಸಿದರು. ಸದರಿ ಸ್ಥಳದಲ್ಲಿ ಒಟ್ಟು 34 ಜನರು ಇದ್ದು ಉಳಿದವರ ಹೆಸರು ನನಗೆ ನೆನಪಿರುವುದಿಲ್ಲ.

ನಂತರ ಚಾಸಾ 2 ಮತ್ತು 3 ರವರು ಎಂಬುವವರನ್ನು ಮಹಜರ್ ಸಾಕ್ಷಿಗಳನ್ನು ನಾನೇ ಬರಮಾಡಿಕೊಂಡಿದ್ದೆವು. ಅವರ ಸಮಕ್ಷಮ 9-30 ರಿಂದ 11-30 ರವರೆಗೂ ಪಂಚನಾಮೆಯನ್ನು ಜರುಗಿಸಿದ್ದೆವು. ಸದರಿ ಸ್ಥಳದಲ್ಲಿ ಐದು ಲಕ್ಷದ ಐವತ್ತು ನಾಲ್ಕು ರೂಪಾಯಿಗಳನ್ನು ವಶಕ್ಕೆ ಪಡೆದೆವು. ಒಟ್ಟು 52 ಇಸ್ಪೀಟ್ ಎಲೆಗಳು, 3 ಟೇಬಲ್‌ಗಳು, 34 ಪ್ಲಾಸ್ಟಿಕ್ ಚೇರುಗಳು, ಪ್ಲಾಸ್ಟಿಕ್ ಬಾಕ್ಸುಗಳು ಇದ್ದು ಅವುಗಳನ್ನು ಹಾಗೂ ಎಲ್ಲಾ ಆರೋಪಿಗಳ ಮೊಬೈಲ್ ಗಳನ್ನು ವಶಕ್ಕೆ ಪಡೆಯಲಾಯಿತು.

ಆರೋಪಿಗಳನ್ನು ರಾತ್ರಿ 12-15 ರ ಸಮಯದಲ್ಲಿ ಠಾಣೆಗೆ ಕರೆದುಕೊಂಡು ಹೋಗಿರುತ್ತೇವೆ. ಠಾಣಾ ಎಸ್ ಹೆಚ್ ಒ., ಅವರಿಗೆ ವರದಿ ಮಾಲು ಹಾಗು ಆರೋಪಿತರನ್ನು ವಶಕ್ಕೆ ನೀಡಿರುತ್ತೇನೆ. ಸದರಿ ಮಹಜರ್ ಕಾಲದಲ್ಲಿ ಸ್ಥಳದಲ್ಲಿ ಫೋಟೋಗಳನ್ನು ತೆಗೆದಿರುತ್ತೇವೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿದ್ದು ಸದರಿ ದಾಖಲೆ ಸ್ಥಳ ಮಹಜರಾಗಿದ್ದು ಅದನ್ನು ನಿಪಿ.1 ಎಂದೂ, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

ಪಂಚರಿಗೆ ನೀಡಿದ ನೋಟಿಸನ್ನು ನಿಪಿ.2 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು.

ಎರಡು ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿಪಿ.3 ಹಾಗೂ 4 ಎಂದೂ ಹಾಗೂ ಒಂದು ಸಿಡಿಯನ್ನು ನಿಪಿ.5 ಎಂದು ಗುರುತಿಸಲಾಯಿತು.

ವರದಿಯನ್ನು ನಿಪಿ.6 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದಿರುವ ರೂ.10/- ಮುಖ ಬೆಲೆಯ ಒಟ್ಟು 32 ನೋಟುಗಳು, ರೂ.20/- ಮುಖಬೆಲೆಯ ಒಟ್ಟು 21 ನೋಟುಗಳು, ರೂ.50/- ಮುಖಬೆಲೆಯ ಒಟ್ಟು 12 ನೋಟುಗಳು, ರೂ.100/- ಮುಖಬೆಲೆಯ ಒಟ್ಟು 66 ನೋಟುಗಳು, ರೂ.200/- ರ ಮುಖ ಬೆಲೆಯ 16 ಒಟ್ಟು ನೋಟುಗಳು ಹಾಗೂ ರೂ.500/- ರ ಮುಖ ಬೆಲೆಯ ಒಟ್ಟು 1086 ನೋಟುಗಳನ್ನು ನೋಡಿ ನನಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಹಣವನ್ನು ಮುದ್ದೆ ಮಾಲು 1 ಎಂದು ಗುರುತಿಸಲಾಯಿತು.

ಒಟ್ಟು 52 ಇಸ್ಪೀಟ್ ಎಲೆಗಳನ್ನು ನೋಡಿ ಸಾಕ್ಷಿ ಗುರುತಿಸಿದ್ದು ಅದನ್ನು ಮುದ್ದೆ ಮಾಲು 2 ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದಿರುವ ಒಟ್ಟು 8 ಮೊಬೈಲ್ ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮುದ್ದೆ ಮಾಲು 3 ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದಿರುವ 3 ಟೇಬಲ್ ಹಾಗೂ 34 ಪ್ಲಾಸ್ಟಿಕ್ ಚೇರುಗಳು, 4 ಕಾರುಗಳು ಹಾಗೂ ಒಂದು ಪ್ಲಾಸ್ಟಿಕ್ ಬಾಕ್ಸನ್ನು, 3 ಬೆಡ್ ಶೀಟುಗಳನ್ನು ಕೃತ್ಯದ ಕಾಲದಲ್ಲಿ ವಶಕ್ಕೆ ಪಡೆದಿರುತ್ತೇವೆ.

ನ್ಯಾಯಾಲಯದ ಮುಂದಿರುವ ಈ ದಿನ ಹಾಜರಾಗಿರುವ 7, 9, 10, 11, 19, 24, 29, 32, 35 ನೇ ಆರೋಪಿಗಳನ್ನು ಸಾಕ್ಷಿ ವಿಸಿ ಮೂಲಕ ನೋಡಿ ಗುರುತಿಸಲು ಸಾಧ್ಯವಿಲ್ಲ ಎಂದು ನುಡಿದಿರುತ್ತಾರೆ.

(ಈ ದಿನ 1, 3, 4, 5, 12, 13, 14, 17, 18, 21, 22, 23, 30, 31, 34 ನೇ ಆರೋಪಿತರು ನ್ಯಾಯಾಲಯದ ಮುಂದೆ ಗೈರು ಹಾಜರಿದ್ದು ಅವರ ಪರವಾಗಿ ಅವರ ವಕೀಲರು ವಿನಾಯಿತಿ ಅರ್ಜಿಯನ್ನು ಸಲ್ಲಿಸಿದ್ದು ಅವರ ಗುರುತಿನ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ

ಎಂದು ನುಡಿದಿರುತ್ತಾರೆ.)

<u>ಪಾಟೀ ಸವಾಲುಃ **1, 2, 6, 7, 10, 11, 16, 19, 32** ಮತ್ತು **33** ನೇ ಆರೋಪಿಗಳ ಪರ ಶ್ರೀ ಹೆಚ್ ಎಸ್ ಎ., ವಕೀಲರವರಿಂದಃ</u>

ಬಂದಿತ್ತು ಎನ್ನಲಾದ ಮಾಹಿತಿಯ ಬಗ್ಗೆ ಹಾಗೂ ಸದರಿ ಘಟನೆಯ ಬಗ್ಗೆ ನಾನು ತಕ್ಷಣವೇ ಜಯಪುರ ಪಿ ಎಸ್ ಐ., ಯವರಿಗೆ ವಿಚಾರ ತಿಳಿಸಿರುವುದಿಲ್ಲ. ಸದರಿ ಸ್ಥಳ ಜಯಪುರ ಠಾಣೆಯಿಂದ ಒಂದು ಕಿ.ಮಿ. ಅಂತರದಲ್ಲಿರುತ್ತದೆ. ಕೃತ್ಯ ನಡೆಯಿತು ಎನ್ನಲಾದ ಸ್ಥಳವು ಜಯಪುರ ಠಾಣೆಯಿಂದ ಸುಮಾರು 22 ಕಿಮೀ ಅಂತರ ಇರುತ್ತದೆ.

ಚಾಸಾ 2 ಮತ್ತು 3 ರವರನ್ನು ಅವರ ಮನೆಯಿಂದ ಕರೆದುಕೊಂಡು ಹೋಗಿದ್ದೆವು. ಜಯಪುರ ಒಂದು ಹೋಬಳಿಯಾಗಿದ್ದು ಅಲ್ಲಿ ತುಂಬಾ ಮನೆಗಳು, ಅಂಗಡಿಗಳು ಇರುತ್ತವೆ ಎಂದರೆ ಸರಿ. ಚಾಸಾ 2 ಮತ್ತು 3 ರವರನ್ನು ಯಾರು ಕರೆದುಕೊಂಡು ಬಂದಿರುತ್ತಾರೆ ಎಂದರೆ ಜಯಪುರ ಠಾಣೆಯ ಸಿಬ್ಬಂದಿಗಳು ಕರೆದುಕೊಂಡು ಬಂದಿರುತ್ತಾರೆ. ಚಾಸಾ 2 ಮತ್ತು 3 ರವರ ತಂದೆಯ ಹೆಸರು ನನಗೆ ಗೊತ್ತಿಲ್ಲ, ಸದರಿಯವರು ಜಯಪುರದ ವಾಸಿಗಳಾಗಿರುತ್ತಾರೆ.

ನಾವು ಕೃತ್ಯ ನಡೆಯಿತು ಎನ್ನಲಾದ ಸ್ಥಳಕ್ಕೆ ಹೋದೆವು ಎಂದಾಗ ಸದರಿ ಸ್ಥಳದಲ್ಲಿ ಆರೋಪಿಗಳನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ. ಮೊದಲ ಬಾರಿಗೆ ಕೊಠಡಿಯ ಒಳಗೆ ಯಾರು ಹೊಗಿದ್ದರು ಎಂದರೆ ಸಿಬ್ಬಂದಿಗಳು ಹೋಗಿದ್ದರು ಎನ್ನುತ್ತಾರೆ. ನಮ್ಮನ್ನು ಕಂಡ ತಕ್ಷಣ ಆರೊಪಿಗಳು ಓಡಲು ಪ್ರಯತ್ನಿಸಿರುವುದಿಲ್ಲ.

ಕೃತ್ಯ ನಡೆಯಿತು ಎನ್ನಲಾದ ಸ್ಥಳದಲ್ಲಿ ಇದ್ದರು ಎನ್ನಲಾದ 34 ಜನ ಆರೋಪಿತರ ಹೆಸರು, ವಿಳಾಸ ಹಾಗೂ ಅವರ ಚಹರೆಯನ್ನು ನನಗೆ ಹೇಳಲಾಗುವುದಿಲ್ಲ ಎಂದರೆ ಸರಿ.

ನಿಪಿ.1 ರ ಮಹಜರನ್ನು ಚಾಸಾ 10 ರವರು ಬರೆದಿರುತ್ತಾರೆ. ಕೃತ್ಯ ನಡೆಯಿತು ಎನ್ನಲಾದ ಸ್ಥಳದ ಅಕ್ಕ ಪಕ್ಕದಲ್ಲಿ ವಾಸದ ಮನೆಗಳು ಇರುವುದು ಕಂಡು ಬಂದಿರುವುದಿಲ್ಲ. ವಾಸದ ಮನೆಗಳು ಎಷ್ಟು ದೂರದಲ್ಲಿ ಇದ್ದವು ಎಂದು ಹೇಳಲಾಗುವುದಿಲ್ಲ ಎಂದರೆ ಸರಿ.

ನಿಪಿ.1 ರಲ್ಲಿ ನಮೂದು ಮಾಡಿರುವ 34 ವ್ಯಕ್ತಿಗಳ ಹೆಸರು, ವಿಳಾಸ ಹಾಗೂ ಚಹರೆಗಳನ್ನು ನನಗೆ ಹೇಳಲಾಗುವುದಿಲ್ಲ ಎಂದರೆ ಸರಿ.

ನ್ಯಾಯಾಲಯದ ಮುಂದಿರುವ ಆರೋಪಿತರು ಕೃತ್ಯದ ಕಾಲದಲ್ಲಿ ಭಾಗಿಯಾಗಿರುತ್ತಾರೆ ಎಂದು ನನಗೆ ಹೇಳಲಾಗುವುದಿಲ್ಲ ಎಂದರೆ ಸರಿ.

ನ್ಯಾಯಾಲಯದ ಮುಂದಿರುವ ಮುದ್ದೆ ಮಾಲು 1 ರ ಹಣವನ್ನು ಕೃತ್ಯ ನಡೆಯಿತು ಎನ್ನಲಾದ ದಿನವೇ ವಶಕ್ಕೆ ಪಡೆದ ಬಗ್ಗೆ ನನಗೆ ಹೇಳಲಾಗುವುದಿಲ್ಲ ಎಂದರೆ ಸರಿ. ಮುದ್ದೆ ಮಾಲು 1 ರ ಮೇಲೆ ನನ್ನ ಸಹಿಯಿರುವ ಚೀಟಿಯನ್ನು ಅಂಟಿಸಿರುತ್ತೇನೆ. ಮುದ್ದೆ ಮಾಲು 1 ರ ಮೇಲೆ ಈ ದಿನ ನನ್ನ ಸಹಿ ಮಾಡಿರುವ ಚೀಟಿ ಇರುವುದಿಲ್ಲ ಎಂದರೆ ನನಗೆ ಆ ಬಗ್ಗೆ ಗೊತ್ತಿರುವುದಿಲ್ಲ. ನಾನು ಸಹಿ ಮಾಡಿ ಅಂಟಿಸಿದ ಚೀಟಿ ಮುದ್ದೆ ಮಾಲು 1 ರ ಮೇಲೆ ಇಲ್ಲದೆ ಇರುವುದರಿಂದ ಸದರಿ ಹಣವನ್ನು ಕೃತ್ಯ ನಡೆಯಿತು ಎನ್ನಲಾದ ದಿನ ವಶಕ್ಕೆ ಪಡೆದೆವು ಎಂದು ಹೇಳಲಾಗುವುದಿಲ್ಲ ಎಂದರೆ ಸರಿ.

ಮುದ್ದೆ ಮಾಲು 3 ರಲ್ಲಿರುವ 8 ಮೊಬೈಲ್ ಗಳು ಕೃತ್ಯಕ್ಕಾಗಿ ವಶಕ್ಕೆ ಪಡೆದ ಬಗ್ಗೆ ಹೇಳಲಾಗುವುದಿಲ್ಲ ಎಂದರೆ ಸರಿ.

ಕೃತ್ಯಕ್ಕೆ ಸಂಬಂಧಿಸಿದ 3 ಟೇಬಲ್ ಗಳಲ್ಲಿ ಆರೋಪಿತರು ಜೂಜಾಟ ಆಡುತ್ತಿದ್ದರು. ಕೃತ್ಯ ನಡೆಯಿತು ಎನ್ನಲಾದ ಸ್ಥಳದಲ್ಲಿ 52 ಇಸ್ಪೀಟ್ ಎಲೆಗಳು ಮಾತ್ರ ನಮಗೆ ಸಿಕ್ಕಿರುತ್ತವೆ. ಜೂಜಾಟ ಆಡಬೇಕಾದರೆ 52 ಇಸ್ಪೀಟ್ ಎಲೆಗಳನ್ನು ಬಳಸಿಕೊಂಡು ಆಡಬೇಕಾಗುತ್ತದೆ ಎಂದರೆ ಸರಿ. ಸದರಿ 3 ಟೇಬಲ್ ಗಳಲ್ಲಿ ಯಾವುದೇ ಇಸ್ಪೀಟ್ ಆಡಬೇಕಾದರೆ 52 ಎಲೆಗಳನ್ನು ಬಳಸಿಕೊಂಡು ಆಡಲು ಬರುವುದಿಲ್ಲ ಎಂದರೆ ಸರಿ. ನಿಪಿ.6 ಅನ್ನು ಚಾಸಾ 10 ರವರೇ ಬೆರಳಚ್ಚು ಮಾಡಿರುತ್ತಾರೆ. ನಿಪಿ.6 ಅನ್ನು ಜಯಪುರ ಠಾಣೆಯಲ್ಲಿ ಟೈಪ್ ಮಾಡಲಾಗಿತ್ತು. ಮುದ್ದೆ ಮಾಲು 2 ಸಾಮಾನ್ಯವಾಗಿ ಎಲ್ಲಾ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿ.

ಮುದ್ದೆ ಮಾಲು 2 ರ ಮೇಲೆ ನನ್ನ ಸಹಿ ಇರುವ ಚೀಟಿ ಇರುವುದಿಲ್ಲ ಎಂದರೆ ನನಗೆ ಆ ಬಗ್ಗೆ ಗೊತ್ತಿರುವುದಿಲ್ಲ. ಆದ್ದರಿಂದ ಮುದ್ದೆ ಮಾಲು 2 ಕೃತ್ಯಕ್ಕೆ ಸಂಬಂಧಪಟ್ಟಂತೆ ವಶಕ್ಕೆ ಪಡೆಯಲಾಯಿತು ಹೇಳಲಾಗುವುದಿಲ್ಲ ಎಂದರೆ ಸರಿ.

ಕೃತ್ಯ ನಡೆಯಿತು ಎನ್ನಲಾದ ಸ್ಥಳದಲ್ಲಿ ಯಾವುದೆ ಮಹಜರ್ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 2 ಹಾಗೂ 3 ರವರು ಕೃತ್ಯ ನಡೆಯಿತು ಎನ್ನಲಾದ ಸ್ಥಳಕ್ಕೆ ಬಂದಿರುವುದಾಗಲೀ, ಮಹಜರಿಗೆ ಸಹಿ ಮಾಡಿರುವುದಾಗಲಿ ಎಲ್ಲಾ ಸುಳ್ಳು ಎಂದರೆ ಸರಿಯಲ್ಲ.

ಆರೋಪಿಗಳು ಜೂಜಾಟ ಆಡುತ್ತಿದ್ದರು ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಡಿಲೈಟ್ ಹೋಮ್ ಸ್ಟೇ ಪ್ರವಾಸಿಗರಿಗಾಗಿ ಮಾಡಿರುವ ಸ್ಥಳ ಎಂದರೆ ಸರಿ.

ಸದರಿ ಹೋಮ್ ಸ್ಟೇನ ಮಾಲಿಕರು ಇಸ್ಪೀಟ್ ಆಡಲು ಅನುಮತಿ ನೀಡಿರುವುದಿಲ್ಲ ಹಾಗೂ ಆರೋಪಿತರು ಜೂಜಾಟ ಆಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲು 1 ರಿಂದ 3 ಹಾಗೂ ಆರೋಪಿತರಿಗೂ ಯಾವುದೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ವರದಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.3 ಹಾಗೂ 4 ರ ಪೋಟೋಗಳನ್ನು ಯಾರು ತೆಗೆದಿರುತ್ತಾರೆ ಎಂದು ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ ಎಂದರೆ ಸರಿ. ನಿಪಿ.3 ಹಾಗೂ 4 ಅನ್ನು ಮೊಬೈಲ್ ಮಾಲಕ ತೆಗೆಯಲಾಗಿರುತ್ತದೆ. ಸದರಿ ಪೋಟೋಗಳನ್ನು ಎಲ್ಲಿ ಪ್ರಿಂಟ್ ತೆಗೆಯಲಾಯಿತು ಎಂದು ನನಗೆ ಮಾಹಿತಿ ಇರುವುದಿಲ್ಲ, ತನಿಖಾಧಿಕಾರಿಗಳಿಗೆ ಮಾಹಿತಿ ಇರುತ್ತದೆ. ನಿಪಿ.3 ಹಾಗೂ 4 ರಲ್ಲಿರುವ ವ್ಯಕ್ತಿಗಳ ಹೆಸರು ವಿಳಾಸ ನನಗೆ ನೆನಪಿರುವುದಿಲ್ಲ. ನಿಪಿ.5 ರ ಬಗ್ಗೆ ತನಿಖಾಧಿಕಾರಿಗೆ ತಿಳಿದಿರುತ್ತದೆ. ನಿಪಿ.3 ಹಾಗೂ 4 ರ ಪೋಟೋ ತೆಗೆದ ಬಗ್ಗೆ ನಿಪಿ.1 ರಲ್ಲಿ ನಮೂದು ಇರುತ್ತದೆ. ನಿಪಿ.3 ಹಾಗೂ 4 ಗಳನ್ನು ತೆಗೆದ ಬಗ್ಗೆ ನಿಪಿ.1 ರಲ್ಲಿ ಯಾವುದೆ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ.1 ರ ಮಹಜರ್ ನಲ್ಲಿ ಎಷ್ಟು ಒಟ್ಟಾರೆ ಮೊತ್ತದ ಹಣವನ್ನು ನಮೂದು ಮಾಡಿರುತ್ತೇವೆ ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ರೂ.5,54,140/- ಎಂದು ನುಡಿದಿರುತ್ತಾರೆ.

ಯಾವ ಯಾವ ಕಂಪನಿಯ ಮೊಬೈಲ್ ಗಳನ್ನು ವಶಕ್ಕೆ ಪಡೆದಿರುತ್ತೇವೆ ಎಂದರೆ ಪೋರ್ಟಕೊ ಕಂಪನಿಯದ್ದಾಗಿರುತ್ತವೆ. ಯಾವ ಮುಖ ಬೆಲೆಯ ಎಷ್ಟು ನೋಟುಗಳನ್ನು ವಶಕ್ಕೆ ಪಡೆದೆವು ಎಂದು ನನಗೆ ನಿಖರವಾಗಿ ಹೇಳಲಾಗುವುದಿಲ್ಲ ಎಂದರೆ ಸರಿ.

ನಿಪಿ.6 ರ ವರದಿಯನ್ನು ನನ್ನ ಅಧೀನ ಅಧಿಕಾರಿ ಪಡೆದಿದ್ದರಿಂದ ಸುಳ್ಳು ವರದಿ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ.

ನಿಪಿ.3 ಹಾಗೂ 4 ರ ಪೋಟೋಗಳ ಬಗ್ಗೆ ನಿಪಿ.6 ರ ವರದಿಯಲ್ಲಿ ತಿಳಿಸಿರುವುದಿಲ್ಲ. ಆರೋಪಿತರು ಯಾವುದೆ ಅಪರಾಧದಲ್ಲಿ ಭಾಗಿಯಾಗದೆ ಹೋದರೂ ಸಹಾ ನಾನು ಸುಳ್ಳು ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲಿಗೂ, ಪ್ರಕರಣಕ್ಕೂ ಹಾಗೂ

ಆರೋಪಿತರಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಆರೋಪಿತರು ಕೃಷಿ ಕುಟುಂಬದವರು ಎಂದರೆ ಸರಿಯಲ್ಲ. ಠಾಣಾ ಅಂಕಿ ಅಂಶಕ್ಕಾಗಿ ಆರೋಪಿತರ ವಿರುದ್ಧ ಸುಳ್ಳು ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು: **12, 13, 14, 17, 4, 23, 24, 15, 20, 24, 25, 30, 32, 3, 32,** ಆರೋಪಿಗಳ ಪರ: ಶ್ರೀ ಬಿಎಸ್ ಎನ್., ವಕೀಲರು, ಶ್ರೀ ಎಂಎನ್ ಎಸ್., ವಕೀಲರು ಶ್ರೀ ಎಂಹೆಚ್ಎಸ್ ಕೆ., ವಕೀಲರು, ಶ್ರೀ ಕೆಕೆಆರ್, ವಕೀಲರು ಹಾಗೂ ಎನ್ಎಂಸಿ., ವಕೀಲರವರಿಂದ:

(1, 2, 6, 7, 10, 11, 16, 19, 32 ಮತ್ತು 33 ನೇ ಆರೋಪಿಗಳ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳಲು ತಿಳಿಸಿರುತ್ತಾರೆ.)

ಮರುವಿಚಾರಣೆ : ಇಲ್ಲ.

(ದಿನಾಂಕ:07-11--2025 ರಂದು ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಓ.

ಸಹಿ/-
ಸಿವಿಲ್ ನ್ಯಾಯಾಧೀಶರು ಮತ್ತು
ಸಾಕ್ಷಿಯ ಸಹಿ: ಪ್ರ.ದ.ನ್ಯಾ.ದಂ: ಕೊಪ್ಪ.